**14. ಯೋಜನೆಯಲ್ಲಿ ಒಳಗೊಳ್ಳದ ಶಸ್ತ್ರಚಿತ್ಸೆಗಳು ಮತ್ತು ಉಪಕರಣಗಳು ಯಾವುವು ?**

ಶಸ್ತ್ರಚಿಕಿತ್ಸೆ ಅವಶ್ಯವಿಲ್ಲದ ಯಾವುದೇ ವೈದ್ಯಕೀಯ ಚಿಕಿತ್ಸೆ ಯೋಜನೆಯಲ್ಲಿ ಲಭ್ಯವಿರುವುದಿಲ್ಲ. ಇದಲ್ಲದೇ ಚಿಕಿತ್ಸೆಗಳಾದ ಕೀಮೊಥೆರಪಿ, ರೇಡಿಯೋಥೆರಪಿ, ಜಾಯಿಂಟ್ ಬದಲಾವಣೆ, ಸುಟ್ಟ ಗಾಯಗಳು, ರಸ್ತೆಅಪಘಾತಗಳು, ಹಲ್ಲಿನ ಶಸ್ತ್ರ ಚಿಕಿತ್ಸೆ, ಚರ್ಮದ ಗ್ರಾಪ್ಟಿಂಗ್, ಸ್ಟಂಟ್ಸ್, ಇಂಪ್ಲಾಂಟ್ಸ್ ಇತ್ಯಾದಿ ಸೌಲಭ್ಯಗಳು ಯೋಜನೆಯಲ್ಲಿ ಸೇರಿರುವುದಿಲ್ಲ. **ಇಂತಹ ಅನಾರೋಗ್ಯಗಳಿಗೆ ಫಲಾನುಭವಿ ಪಡೆಯುವ ವೈದ್ಯಕೀಯ ಚಿಕಿತ್ಸೆ, ಔಷದೋಪಚಾರಗಳ ಹಾಗೂ ಶಸ್ತ್ರ ಚಿಕಿತ್ಸಾ ವೆಚ್ಚವನ್ನು ಫಲಾನುಭವಿಗಳೇ ಭರಿಸಬೇಕು.**

**15. ಯೋಜನೆಯ ಸೌಲಭ್ಯವನ್ನು ಎಲ್ಲಿ ಪಡೆಯಬಹುದು ?**

ಯಶಸ್ವಿನಿ ಯೋಜನೆಯ ಫಲಾನುಭವಿಗಳು ಯೋಜನೆಯ ಸೌಲಭ್ಯವನ್ನು ಮುಖ್ಯವಾಗಿ ಆಯಾ ಗ್ರಾಮೀಣ ಸಹಕಾರಿಗಳು ವಾಸಿಸುವ ಜಿಲ್ಲೆಯಲ್ಲಿ ಟ್ರಸ್ಟಿನಿಂದ **ಅಂಗೀಕೃತವಾದ ಆಸ್ಪತ್ರೆಗಳು / ನರ್ಸಿಂಗ್ ಹೋಂಗಳಲ್ಲಿ ಅಥವಾ ರಾಜ್ಯದಲ್ಲಿ ಟ್ರಸ್ಟಿನಿಂದ ಅಂಗೀಕೃತವಾದ ಯಾವುದೇ ಆಸ್ಪತ್ರೆಗಳು / ನಸಿಂಗ್ ಹೋಂಗಳಲ್ಲಿ ಪಡೆಯಬಹುದು.**

**16. ಯಶಸ್ವಿನಿ ಯೋಜನೆಯ ಜಾಲದಲ್ಲಿ ಎಷ್ಟು ಆಸ್ಪತ್ರೆಗಳು ನೋಂದಣಿ ಆಗಿದೆ ?**

ಈವರೆಗೆ ರಾಜ್ಯದಲ್ಲಿ ಸುಮಾರು **494** ಆಸ್ಪತ್ರೆಗಳು ಅಂಗೀಕೃತ ಆಸ್ಪತ್ರೆಗಳಾಗಿ ಗುರುತಿಸಲ್ಪಟ್ಟಿವೆ. ಆಸ್ಪತ್ರೆಗಳ ಪಟ್ಟಿಯನ್ನು ಯಶಸ್ವಿನಿ ವೆಬ್‌ಸೈಟಿನಲ್ಲಿ ಕೂಡಾ ವೀಕ್ಷಿಸಬಹುದು. ಯಶಸ್ವಿನಿ ಸದಸ್ಯತ್ವ ನೋಂದಾಯಿಸುವಾಗ/ ನವೀಕರಿಸುವಾಗ ಸಂಬಂಧಪಟ್ಟ ಸಹಕಾರ ಸಂಘಗಳಲ್ಲಿ ಆಸ್ಪತ್ರೆಗಳ ಪಟ್ಟಿಯನ್ನು ಪಡೆದುಕೊಳ್ಳಬಹುದಾಗಿದೆ.

**17. ಶಸ್ತ್ರಚಿಕಿತ್ಸೆಯ ಅವಶ್ಯಕತೆಯಿಲ್ಲದೆ ಕೇವಲ ವೈದ್ಯಕೀಯಚಿಕಿತ್ಸೆ ವೈದ್ಯೋಪಚಾರ ಮಾತ್ರ ಬೇಕಾದಲ್ಲಿ ಏನಾಗುತ್ತದೆ ?**

ಯಶಸ್ವಿನಿ ಕೇವಲ ಶಸ್ತ್ರಚಿಕಿತ್ಸೆಗಳಿಗೆ ಅನ್ವಯವಾಗುವ ಯೋಜನೆ. ಶಸ್ತ್ರಚಿತ್ಸೆಯ ಅವಶ್ಯವಿಲ್ಲದ ಔಷಧೋಪಚಾರಗಳು, ವೈದ್ಯಕೀಯ ಚಿಕಿತ್ಸೆಗಳು ಯೋಜನೆಯಲ್ಲಿ ಒಳಗೊಂಡಿರುವುದಿಲ್ಲ. ಸದರಿ ಔಷಧೋಪಚಾರ/ಚಿಕಿತ್ಸೆಯ ವೆಚ್ಚವನ್ನು ಗ್ರಾಮೀಣ ಸಹಕಾರಿಗಳು ನೇರವಾಗಿ ಆಸ್ಪತ್ರೆಗೆಭರಿಸಬೇಕು ಮತ್ತು ಔಷಧ ವೆಚ್ಚವನ್ನು ಯಶಸ್ವಿನಿ ಫಲಾನುಭವಿಗಳೇ ವಹಿಸಿಕೊಳ್ಳಬೇಕು. ಶಸ್ತ್ರಚಿಕಿತ್ಸೆ ಅವಶ್ಯವಿಲ್ಲದ ಅನಾರೋಗ್ಯದ ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿದಾಗ ಮಾಡಿದ ಹೊರರೋಗಿ ತಪಾಸಣೆ, ಹೊರ ರೋಗಿಯಾಗಿ ತಂದ ಔಷಧಿಗಳು ಮತ್ತು ಒಳರೋಗಿ ಔಷಧೋಪಚಾರದ ವೆಚ್ಚವನ್ನು ಯಶಸ್ವಿನಿ ಟ್ರಸ್ಟ್ ಭರಿಸುವುದಿಲ್ಲ.

**18. ಯೋಜನೆಯ ಫಲಾನುಭವಿತ್ವವನ್ನು ವರ್ಗಾಯಿಸುವುದಕ್ಕೆ ಅವಕಾಶವಿದೆಯೇ ?**

ಇಲ್ಲ,ಆರೋಗ್ಯ ಸವಲತ್ತುಗಳನ್ನು ಪಡೆಯಬಯಸುವವರು ಸ್ವತಃತಾವೇ ಕಡ್ಡಾಯವಾಗಿ ಯೋಜನೆಯ ಫಲಾನುಭವಿಗಳಾಗಿರಬೇಕು.

**19. ಶಸ್ತ್ರಚಿಕಿತ್ಸೆ ಪಡೆದ ಫಲಾನುಭವಿಗಳ ಬಿಲ್ಲಿನ ಪಾವತಿ ಹೇಗೆ ಆಗುತ್ತದೆ ?**

ಯಶಸ್ವಿನಿ ಫಲಾನುಭವಿಗಳು, ಆಸ್ಪತ್ರೆಗೆ ಬಿಲ್ಲನ ಹಣವನ್ನುಪಾವತಿ ಮಾಡಬೇಕಾಗಿಲ್ಲ, **ಆಸ್ಪತ್ರೆಯವರು ಚಿಕಿತ್ಸಾ ಪೂರ್ವಾನುಮತಿಯಲ್ಲಿ ಮಂಜೂರು ಮಾಡಿದ ಮೊತ್ತಕ್ಕೆ ಬಿಲ್ಲನ್ನು ಅನುಷ್ಠಾನ ಸಂಸ್ಥೆಗೆ ಕಳಿಸುವರು.** ಅನುಷ್ಠಾನ ಸಂಸ್ಥೆಯವರು ಬಿಲ್ಲನ ಪರಿಶೀಲನೆ ಮಾಡಿ ಅವು ಯೋಜನೆಯ ಪ್ರಕಾರ ಇದ್ದಲ್ಲಿ ಅವುಗಳನ್ನು ಪಾಸು ಮಾಡಲು ಯಶಸ್ವಿನಿ ಟ್ರಸ್ಟ್‌ಗೆ ಕಳಿಸುವರು. **ಯಶಸ್ವಿನಿ ಟ್ರಸ್ಟ್ ಆಸ್ಪತ್ರೆಗಳ ಬಿಲ್ಲನ್ನು ಮಂಜೂರು ಮಾಡಿದ ನಂತರ ಬಿಲ್ಲಿನ ಮೊತ್ತವನ್ನು ಅನುಷ್ಠಾನ ಸಂಸ್ಥೆಯ ಮೂಲಕ ಆಸ್ಪತ್ರೆಗೆ ಪಾವತಿಮಾಡಲಾಗುವುದು.**

**20. ಅನುಷ್ಠಾನ ಸಂಸ್ಥೆ ಎಂದರೇನು ?**

ಅನುಷ್ಠಾನ ಸಂಸ್ಥೆಯು ಯೋಜನೆಯಲ್ಲಿ ಥರ್ಡ್ ಪಾರ್ಟಿ **ಆಡ್ಮಿನಿಸ್ಟ್ರೇಟರ್ (ಟಿಪಿಎ)ಆಗಿ ಕಾರ್ಯ ನಿರ್ವಹಿಸುತ್ತದೆ ಹಾಗೂ ಯೋಜನೆಯ ಅನುಷ್ಠಾನದ ಜವಾಬ್ದಾರಿ ಹೊಂದಿರುತ್ತದೆ.** ಅನುಷ್ಠಾನ ಸಂಸ್ಥೆಯ ಹೆಸರು: **ಮೆಡಿ ಅಸಿಸ್ಟ್ ಇಂಡಿಯಾ ಟಿಪಿಎ ಪ್ರೈ. ಲಿ., ಬೆಂಗಳೂರು.**

- ಒಟ್ಟಿನಲ್ಲಿ “ಒಬ್ಬನಿಗಾಗಿ ಎಲ್ಲರೂ, ಎಲ್ಲರಿಗಾಗಿ ಒಬ್ಬನು” ಎಂಬ ಸಹಕಾರ ತತ್ವದ ಆಧಾರದ ಮೇಲೆ ಯಶಸ್ವಿನಿ ಯೋಜನೆ ರೂಪುಗೊಂಡಿದೆ.ಉತ್ತಮ ವೈದ್ಯಕೀಯ ಸೌಲಭ್ಯ ಯಶಸ್ವಿನಿ ಫಲಾನುಭವಿಗಳಿಗೂ ಲಭ್ಯ.
- ಇನ್ನೂ ನಿಮ್ಮಲ್ಲಿ ಪ್ರಶ್ನೆ / ಸಂದೇಹಗಳಿದ್ದರೆ, ನಿಮ್ಮ ಜಿಲ್ಲೆಯಸಹಕಾರ ಸಂಘಗಳ ಉಪ ನಿಬಂಧಕರ **ಕಛೇರಿಯನ್ನು ಅಥವಾ ಹತ್ತಿರದ ಗ್ರಾಮೀಣ ಸಹಕಾರ ಸಂಘಗಳನ್ನು ಸಂಪರ್ಕಿಸಿರಿ.**

---

**ಪ್ರಕಟಣೆ :**

**ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಟ್ರಸ್ಟ್**

Website : www.yeshasvini.kar.nic.in

Yeshasvini Helpline Nos.
080 - 26783111 / 26784111

Trust Contact No: 080 - 22032046

**ಯಶಸ್ವಿನಿ**

ರೈತರ ಆರೋಗ್ಯ
ನಾಡಿನ ಭಾಗ್ಯ

**ಗ್ರಾಮೀಣ ಸಹಕಾರಿಗಳಿಗಾಗಿ ಸಹಕಾರ ಇಲಾಖೆಯ ಮೂಲಕ ಕರ್ನಾಟಕ ಸರಕಾರ ಅರ್ಪಿಸಿರುವ ದೇಶದ ಮೊಟ್ಟ ಮೊದಲ ಗ್ರಾಮೀಣ ಸಹಕಾರಿಗಳ ಆರೋಗ್ಯ ಯೋಜನೆ**

# “ಯಶಸ್ವಿನಿ ಅಂದರೆ ರಾಜ್ಯದ ಗ್ರಾಮೀಣ ಸಹಕಾರಿಗಳ ಆರೋಗ್ಯ ಲಕ್ಷ್ಮಿ”

**ಸಹಕಾರಿ ಇಲಾಖೆ, ಕರ್ನಾಟಕ ಸರಕಾರ**

**1. ಯಶಸ್ವಿನಿ ಯೋಜನೆ ಅಂದರೇನು ?**

ಯಶಸ್ವಿನಿ ಗ್ರಾಮೀಣ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆ. ಕರ್ನಾಟಕರಾಜ್ಯದ ಗ್ರಾಮೀಣ ಸಹಕಾರಿಗಳಿಗಾಗಿಯೇ ರೂಪಗೊಂಡಿರುವ ಒಂದು ಸ್ವಯಂ–ನಿಧಿ ಶಸ್ತ್ರಚಿಕಿತ್ಸಾ ಯೋಜನೆ.ಈ ಯೋಜನೆಯಡಿ ಗ್ರಾಮೀಣ ಸಹಕಾರಿಯೊಬ್ಬರು ತಿಂಗಳಿಗೆ ಇಂತಿಷ್ಟರಂತೆ ನಿಗದಿತ ಪ್ರಮಾಣದಲ್ಲಿ ಒಂದು ವರ್ಷಕ್ಕೆ ವಂತಿಗೆನೀಡಿ, ಆ ಒಂದು ವರ್ಷದ ಅವಧಿಯಲ್ಲಿ ಯೋಜನೆಯಲ್ಲಿ ಒಳಗೊಂಡ ಯಾವುದೇ ಶಸ್ತ್ರ ಚಿಕಿತ್ಸೆಯನ್ನು ನಿಗದಿತ ಮಿತಿಯೊಳಗೆ, ಷರತ್ತು ಮತ್ತು ನಿಯಮಗಳಿಗೆ ಒಳಪಟ್ಟು ಟ್ರಸ್ಟಿನಿಂದ ಅಂಗೀಕೃತ ಯಾವುದೇ ಆಸ್ಪತ್ರೆಗಳಲ್ಲಿ ನಗದುರಹಿತವಾಗಿ ಪಡೆಯಬಹುದು.

**2. ಯೋಜನೆಯ ಅವಧಿ ಎಷ್ಟು ?**

ಈ ಯೋಜನೆಯಲ್ಲಿ ಪ್ರತಿ ನೋಂದಣಿಯ ಅವಧಿ ಒಂದು ವರ್ಷ.ಜೂನ್ 1 ರಿಂದ ಪ್ರಾರಂಭವಾಗಿ ಮೇ 31 ರಂದು ಮುಕ್ತಾಯಗೊಳ್ಳುತ್ತದೆ.

**3. ಯಶಸ್ವಿನಿ ಯೋಜನೆಯ ವಿಮಾ ಯೋಜನೆಯೇ ?**

ಇದು ಒಂದು ಸ್ವಯಂನಿಧಿ ಶಸ್ತ್ರಚಿಕಿತ್ಸಾ ಯೋಜನೆ, ವಿಮಾ ಯೋಜನೆಯಲ್ಲ.

**4. ಯೋಜನೆಯ ವೈಶಿಷ್ಟ್ಯವೇನು ?**

ವಿಮಾ ಸಂಸ್ಥೆಗಳ ಯೋಜನೆಗಳಲ್ಲಿ ನೋಂದಣಿಗೆ ಮುಂಚೆ ಇರುವಂತಹ ರೋಗಗಳಿಗೆ ವಿಮಾ ರಕ್ಷಣೆ ಇರುವುದಿಲ್ಲ. ಆದರೆ ಯಶಸ್ವಿನಿ ಯೋಜನೆಯಡಿ ನೋಂದಾವಣೆಗೆ ಮುಂಚೆ ಇರಬಹುದಾದಂತಹ ರೋಗಗಳಿಗೂ ಶಸ್ತ್ರಚಿಕಿತ್ಸಾ ಸೌಲಭ್ಯ ಲಭ್ಯವಿರುತ್ತದೆ.

**5. ಈ ಯೋಜನೆಯ ಫಲಾನುಭವಿಯಾಗುವುದು ಹೇಗೆ ?**

ಪ್ರತಿ ವರ್ಷ ಫೆಬ್ರವರಿ ಮಾಹೆಯಿಂದ ಮೇ ಅಂತ್ಯದವರೆಗೆ ಅರ್ಹ ಗ್ರಾಮೀಣ ಸಹಕಾರ ಸಂಘಗಳ ಮೂಲಕ ಫಲಾನುಭವಿಗಳ ಹೊಸ ನೋಂದಾವಣೆ/ನವೀಕರಣ ಮಾಡಲಾಗುತ್ತದೆ.ಯೋಜನೆಯ ಫಲಾನುಭವಿಯಾಗಬಯಸುವ ಗ್ರಾಮೀಣ ಸಹಕಾರಿಯೊಬ್ಬರು ಯಶಸ್ವಿನಿ ನೋಂದಾವಣೆ ವರ್ಷದ ಜೂನ್ 1ಕ್ಕೆ ಕನಿಷ್ಟ 6 ತಿಂಗಳ ಮೊದಲು ಅರ್ಹ ಸಹಕಾರ ಸಂಘದ ಸದಸ್ಯನಾಗಿದ್ದರೆ, ಆ ಸಂಘದ ಕಾರ್ಯದರ್ಶಿಯಿಂದ ನೋಂದಣೆ ನಮೂನೆ ಪಡೆದು, ಅದನ್ನು ಭರ್ತಿ ಮಾಡಿ, ನಿಗದಿತ ಪ್ರಮಾಣದ ವಂತಿಗೆ ಹಣ ಪಾವತಿ ಮಾಡಿ ಇತ್ತೀಚಿನ ಎರಡು ಭಾವಚಿತ್ರಗಳನ್ನು ಕೊಟ್ಟು ಫಲಾನುಭವಿಯಾಗಬಹುದು. ಈಗಾಗಲೇ ನೋಂದಾಯಿಸಿದ್ದ ಫಲಾನುಭವಿಯು ಆ ವರ್ಷಕ್ಕೆ ನಿಗದಿ ಮಾಡಿದ ವಂತಿಗೆಯನ್ನು ಪಾವತಿಮಾಡಿ ಕಾರ್ಡನ್ನು ನವೀಕರಿಸಬಹುದು.

**6. ಫಲಾನುಭವಿತ್ವ ಬಯಸುವವರು ಪಾವತಿಸಬೇಕಾದ ವಂತಿಗೆಹಣ ಎಷ್ಟು?**

ಫಲಾನುಭವಿಯಾಗಬಯಸುವ ಪ್ರತಿಯೊಬ್ಬರೂ ವರ್ಷಕ್ಕೆ ನಿಗದಿತಪ್ರಮಾಣದ ವಂತಿಗೆ ಹಣ ನೀಡಬೇಕು. ಉದಾ: 2012–13ನೇ ಸಾಲಿಗೆ ವಾರ್ಷಿಕ ವಂತಿಗೆ ರೂ.210/– ಆಗಿರುತ್ತದೆ. ಒಂದೇ ಕುಟುಂಬದ 5 ಅಥವಾ 5ಕ್ಕಿಂತ ಹೆಚ್ಚು ಸದಸ್ಯರು ನೋಂದಾವಣೆಯಾದಲ್ಲಿ ವಂತಿಗೆಯಲ್ಲಿ ಶೇ.15 ರಿಯಾಯಿತಿ ಇರುತ್ತದೆ.

**7. ಯೋಜನೆಯ ಫಲಾನುಭವಿಯಾಗಲು ಇರಬೇಕಾದ ಅರ್ಹತೆಳೇನು ?**

ಈ ಯೋಜನೆಯ ಫಲಾನುಭವಿಯಾಗಲು ಕನಿಷ್ಟ 6 ತಿಂಗಳು ಮುಂಚಿತ ಅರ್ಹ ಗ್ರಾಮೀಣ ಸಹಕಾರ ಸಂಘವೊಂದರ ಸದಸ್ಯರಾಗಿಬೇಕು. ಗ್ರಾಮೀಣ ಸಹಕಾರ ಸಂಘದ ಸದಸ್ಯರ ಪತಿ, ಪತ್ನಿ, ಮಕ್ಕಳು,ತಂದೆ, ತಾಯಿ ಇತ್ಯಾದಿ ಅವಿಭಾಜ್ಯ ಕುಟುಂಬ ಸದಸ್ಯರು ಫಲಾನುಭವಿಯಾಗಲು ಅರ್ಹರು. ಅಲ್ಲದೇ ಗ್ರಾಮೀಣ ಸಹಕಾರ ಸಂಘ/ಬ್ಯಾಂಕುಗಳೊಡನೆ ವ್ಯವಹರಿಸುತ್ತಿರುವ ಗ್ರಾಮೀಣ ಸ್ತ್ರೀಶಕ್ತಿ ಗುಂಪು,ಸ್ವ ಸಹಾಯಗುಂಪಿನ ಸದಸ್ಯರು ಮತ್ತು ಅವರ ಕುಟುಂಬದ ಎಲ್ಲಾಸದಸ್ಯರು ಯೋಜನೆಯ ಫಲಾನುಭವಿಯಾಗಬಹುದು.

**8. ಯೋಜನೆಯ ಸೌಲಭ್ಯ ಪಡೆಯಲು ವಯೋಮಿತಿ ನಿಗದಿಪಡಸಲಾಗಿದೆಯೇ ?**

ಹೌದು, ಯೋಜನೆಯ ಸೌಲಭ್ಯವನ್ನು ನವಜಾತ ಶಿಶುವಿನಿಂದ 75 ವರ್ಷಗಳವರೆಗೆ ಪಡೆಯಬಹುದು. ಆದರೆ 75 ವರ್ಷಕ್ಕಿಂತ ಮೇಲ್ಪಟ್ಟು ವಯಸ್ಸಾದವರು ಯೋಜನೆಯ **ಸೌಲಭ್ಯ ಪಡೆಯಲು** ಅರ್ಹರಾಗುವುದಿಲ್ಲ.

**9. ಯೋಜನೆಗೆ ಸರ್ಕಾರದ ಸಹಕಾರ ಇದೆಯೇ ?**

ಇದೆ, ಕರ್ನಾಟಕ ಸರ್ಕಾರದ ಸಹಕಾರ ಇಲಾಖೆ ಈ ಯೋಜನೆಯನ್ನು ರೂಪಿಸಿ ಕಾರ್ಯರೂಪಕ್ಕೆ ತಂದಿದೆ. ಸರ್ಕಾರ ಪ್ರತಿ ವರ್ಷ ಯೋಜನೆಯ ಅನುಷ್ಟಾನಕ್ಕೆ ಸಹಾಯಧನ ಒದಗಿಸುತ್ತದೆ.

**10. ಯೋಜನೆಯಿಂದ ಗ್ರಾಮೀಣ ಸಹಕಾರಿಗಳಿಗೇನುಪ್ರಯೋಜನ ?**

ಯೋಜನೆಯ ಸದಸ್ಯತ್ವ ಹೊಂದಿರುವ ಗ್ರಾಮೀಣ ಸಹಕಾರಿ ಆ ಒಂದು ವರ್ಷದಲ್ಲಿ ಅಗತ್ಯವಾಗಬಹುದಾಂತಹ ಯಾವುದೇ ಶಸ್ತ್ರಚಿಕಿತ್ಸೆಯನ್ನು **ಅಂಗೀಕೃತ ಆಸ್ಪತ್ರೆಗಳಲ್ಲಿ ಕೆಲವು ಷರತ್ತುಗಳಿಗೆ ಒಳಪಟ್ಟು ನಿಗದಿತ ಮಿತಿಯೊಳಗೆ ನಗದುರಹಿತವಾಗಿ ಪಡೆಯಬಹುದಾಗಿದೆ.**

**11. ಯೋಜನೆಯಲ್ಲಿ ಒಳಗೊಂಡಿರುವ ಶಸ್ತ್ರಚಿಕಿತ್ಸೆಗಳು ಯಾವುವು?**

ಯೋಜನೆಯಲ್ಲಿ ಮೂಳೆ, ನೇತ್ರ, ಉದರ, ಕಿವಿ, ಮೂಗು, ನರ,ಗಂಟಲು, ಮೂತ್ರಪಿಂಡ, ಹೃದಯ ಇವುಗಳಿಗೆ ಸಂಬಂಧಿಸಿದಂತೆ ಗುರುತಿಸಿದ ಸುಮಾರು 805 ಶಸ್ತ್ರ ಚಿಕಿತ್ಸೆಗಳಲ್ಲದೆ ಈ ಕೆಳಗಿನ ತುರ್ತು ವೈದ್ಯಕೀಯ ಚಿಕಿತ್ಸಾ ಸೌಲಭ್ಯಗಳು ಕೆಲವೊಂದು ಷರತ್ತುಗಳಿಗೊಳಪಟ್ಟು ಲಭ್ಯವಿರುತ್ತವೆ.

- ಸಾಮಾನ್ಯ ಹೆರಿಗೆ, ನವಜಾತ ಶಿಶುವಿನ ಶುಶ್ರೂಷೆಕೃಷಿ ಉಪಕರಣಗಳಿಂದಾಗುವ ಅಪಘಾತಗಳು, ನೀರಿನಲ್ಲಿ ಮುಳುಗುವುದು, ನಾಯಿ ಕಡಿತ, ಹಾವು ಕಡಿತ, ಹೋರಿ ಇರಿತ, ವಿದ್ಯುತ್ ಆಘಾತಗಳು ಇತ್ಯಾದಿಗಳು

**12. ಯಶಸ್ವಿನಿ ಯೋಜನೆಯಡಿಯಲ್ಲಿ ಒಳಗೊಂಡ ಇತರಸೌಲಭ್ಯಗಳು ಯಾವುವು ?**

ಟ್ರಸ್ಟಿನಿಂದ ಅಂಗೀಕೃತವಾದ ಆಸ್ಪತ್ರೆಗಳಲ್ಲಿ ಯಶಸ್ವಿನಿ ಫಲಾನುಭವಿಗಳು ಉಚಿತ ಹೊರರೋಗಿ ಸಲಹೆ ಮತ್ತು ರಿಯಾಯಿತಿ ದರದಲ್ಲಿ ವೈದ್ಯಕೀಯ ತಪಾಸಣೆಗಳನ್ನು ಪಡೆಯಬಹುದು.

**13. ಯಶಸ್ವಿನಿ ಯೋಜನೆಯಡಿಯಲ್ಲಿ ಸೌಲಭ್ಯ ಪಡೆಯುವುದು ಹೇಗೆ?**

ಯಶಸ್ವಿನಿ ಫಲಾನುಭವಿಗಳು ಶಸ್ತ್ರಚಿಕಿತ್ಸೆ ಬೇಕಾದಲ್ಲಿ ತಮ್ಮ ಯೂನಿಕ್ ಐ.ಡಿ. ಸಂಖ್ಯೆ ಹೊಂದಿರುವ ಸದಸ್ಯರ ಉಪಯೋಗಕ್ಕಾಗಿ ನೀಡಲಾದ ಮೂಲ ಗುರುತಿನ ಕಾರ್ಡ ಮತ್ತು ಮೂಲ ಹಣ ಪಾವತಿರಸೀದಿಯೊಂದಿಗೆ ಯೋಜನೆಯಡಿಯಲ್ಲಿ ಅಂಗೀಕೃತವಾದ ಆಸ್ಪತ್ರೆಗೆ ಬೇಟಿ ನೀಡಬೇಕು. ಆಸ್ಪತ್ರೆಯ ವೈದ್ಯಾಧಿಕಾರಿಗಳು ಅಂತಹ ಫಲಾನುಭವಿಗಳ ಆರೋಗ್ಯ ತಪಾಸಣೆ ಮಾಡಿ, ಶಸ್ತ್ರಚಿಕಿತ್ಸೆ ಅವಶ್ಯಕಂಡು ಬಂದಲ್ಲಿ ಮತ್ತು ಸದರಿ ಶಸ್ತ್ರಚಿಕಿತ್ಸೆಯು ಯೋಜನೆಯಲ್ಲಿ ಒಳಗೊಂಡಿದ್ದಲ್ಲಿ, ವಿವರಗಳೊಂದಿಗೆ ಅನುಷ್ಠಾನ ಸಂಸ್ಥೆಗೆ ಇಂಟರ್‌ನೆಟ್ ಮುಖಾಂತರ ಪ್ರಸ್ತಾಪ ಕಳಿಸುವರು. ಅನುಷ್ಠಾನ ಸಂಸ್ಥೆಯವರು ಪ್ರಸ್ತಾಪವನ್ನು ಪರೀಶೀಲಿಸಿ ಚಿಕಿತ್ಸಾ ಪೂರ್ವಾನುಮತಿ ನೀಡಿದ ನಂತರ ಆಸ್ಪತ್ರೆಯವರು ಶಸ್ತ್ರ ಚಿಕಿತ್ಸೆಯನ್ನು ನಿರ್ವಹಿಸುವರು.ಯಶಸ್ವಿನಿ ಫಲಾನುಭವಿಗಳು ಆಸ್ಪತ್ರೆಗೆ ಸೇರಿದಾಗ ಶಸ್ತ್ರ ಚಿಕಿತ್ಸೆಗೆ ಹಣ ಪಾವತಿಮಾಡಬೇಕಾಗಿಲ್ಲ. ಈ ಯೋಜನೆಯಲ್ಲಿ ಗುರುತಿಸಿದ ಶಸ್ತ್ರ ಚಿಕಿತ್ಸೆಗಳು ಕೆಲವೊಂದು ಷರತ್ತುಗಳಿಗೊಳಪಟ್ಟು ನಗದು ರಹಿತವಾಗಿರುತ್ತದೆ. **ಈ ಶಸ್ತ್ರಚಿಕಿತ್ಸೆಯ ವೆಚ್ಚವನ್ನು ಆಸ್ಪತ್ರೆಗೆ ಟ್ರಸ್ಟ್ ಭರಿಸುತ್ತದೆ.**